ದಿನಾಂಕ:16/08/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರಃ ಶ್ರೀ ಎಸ್.ಆರ್.ಎಚ್. ವಕೀಲರಿಂದಃ–**

1. ಈ ದಿನ ನಾನು ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾಗಿರುತ್ತವೆ. ಅದರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. ಅದರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಇಂದು ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆ ವಿಚಾರಣಾ ಪ್ರಕ್ರಿಯೆ ಮತ್ತು ವರದಿಯನ್ನು (ಪುಟ ಸಂಖ್ಯೆಃ 1 ರಿಂದ 26) ಒಟ್ಟಾಗಿ ಹಾಜರು ಪಡಿಸಿರುತ್ತೇನೆ. ಅದನ್ನು ನಿಶಾನೆಗೊಳಿಸಲು ಅರ್ಜಿದಾರರ ಪರ ವಕೀಲರು ತಕರಾರು ಮಾಡಿರುತ್ತಾರೆ, ಆದ್ದರಿಂದ ತಕರಾರಿಗೆ ಒಳಪಟ್ಟು ಅದನ್ನು ನಿ.ಆರ್-1 ಅಂತಾ ಗುರುತಿಸಲಾಯಿತು.

2. ಅರ್ಜಿದಾರರಿಗೆ ಯೋಗ್ಯ ಅವಕಾಶ ನೀಡಿ, ಸದರಿ ದಾಖಲೆಗಳ ಅನ್ವಯ ಅವನನ್ನು ವಜಾಗೊಳಿಸಿರುವುದು ಉರ್ಜಿತವಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಕೆ.ಸಿ.ಪಿ. ವಕೀಲರಿಂದಃ–**

3. ಈ ಪ್ರಕರಣದ ವಿಚಾರಣಾ ನಡಾವಳಿಯು ನಿ.ಆರ್-1 ರಲ್ಲಿ ಒಂದೇ ಪುಟದಲ್ಲಿ ಅಂದರೆ ಪುಟ ಸಂಖ್ಯೆ-1 ರಲ್ಲಿ ಇದೆ. ಎರಡು ಮುದ್ದತ್ತುಗಳಲ್ಲಿ ವಿಚಾರಣೆಯನ್ನು ಮುಕ್ತಾಯ ಗೊಳಿಸಿದ್ದು ಕಂಡುಬರುತ್ತದೆ ಅಂದರೆ ಸರಿ. ಪುಟ ಸಂಖ್ಯೆ-4 ವಿಚಾರಣಾ ನೋಟೀಸಿನ ಪೇಪರ ಪ್ರಕಟಣೆ ಯು ಅರ್ಜಿದಾರ ಅಲ್ಲದೇ ಬೇರೆ ಗೈರು ಹಾಜರಾದ ಸಿಬ್ಬಂದಿಗಳದ್ದು ಒಳಗೊಂಡಿದ್ದಾಗಿದೆ ಅಂದರೆ ಸರಿ. ಅದು ದಿನಾಂಕಃ12/2/2015 ರಂದು ಪ್ರಕಟಗೊಂಡ ವಿಜಯ ಕರ್ನಾಟಕ ದಿನಪತ್ರಿಕೆ ಆಗಿರುತ್ತದೆ. ಸದರಿ ಪ್ರಕಟಣೆಯು ಸದರಿ ದಿನಪತ್ರಿಕೆಯ ಪುಟ ಸಂಖ್ಯೆ-8 ರಲ್ಲಿ ಇರುತ್ತದೆ. ಯಾವ ವ್ಯಾಪ್ತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಕಟಣೆಯಾಗಿದೆ ಅಂತಾ ನಮೂದು ಇಲ್ಲ. ಅರ್ಜಿದಾರಳು ವಾಸವಾಗಿರುವ ಸ್ಥಳದ ವ್ಯಾಪ್ತಿಯಲ್ಲಿ ಅದು ಪ್ರಕಟವಾಗಿರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ನಾವು ಸರಿಯಾದ ನೋಟೀಸನ್ನು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ವಿಚಾರಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸರಿಯಾದ ಕಾಲಾವಕಾಶ ನೀಡಿಲ್ಲ ಅಂದರೆ ಸರಿಯಲ್ಲ. ಸದರಿ ಪೇಪರ ಪ್ರಕಟಣೆ ಕೊಟ್ಟರೂ ಕೂಡ, ಅರ್ಜಿದಾರಳು ವಿಚಾರಣೆಗೆ ಹಾಜರಾಗಲಿಲ್ಲ ಅಂತಾ ವಿಚಾರಣಾ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲಾಯಿತು. ವಿಚಾರಣಾ ಪ್ರಕ್ರಿಯೆ ಅರ್ಜಿದಾರಳ ವಿರುದ್ಧ ತಾರತಮ್ಯದಿಂದ ಕೂಡಿದೆ ಅಂದರೆ ಸರಿಯಲ್ಲ. ವಿಚಾರಣಾ ಪ್ರಕ್ರಿಯೆಯು ಇಲಾಖಾ

ನಿಯಮಾವಳಿ ಪ್ರಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ವಿಚಾರಣಾ ಪ್ರಕ್ರಿಯೆ ಕಾನೂನು ಬಾಹಿರವಾಗಿದೆ ಮತ್ತು ಅರ್ಜಿದಾರಳಿಗೆ ಯೋಗ್ಯ ಕಾಲಾವಕಾಶ ನೀಡಿರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*
ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.